**ಅಸಲು ದಾವೆ ಸಂಖ್ಯೆ -98/2022**

**ಡಿ.ಡಬ್ಲ್ಯೂ-1**

<u>ದಿನಾಂಕ **18-08-2026** ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : ಶ್ರೀ.ಎಸ್.ಐ.ಪಿ ವಕೀಲರಿಂದ ಪ್ರತಿವಾದಿ-**2** ಪರವಾಗಿ</u>

1.ನೀವು 2 ನೇ ಪ್ರತಿವಾದಿ ಬೌರವ್ವ ಪೂಜಾರಿ ಇವರಿಗೆ ಸರ್ವೆ ನಂ.45/1 ರ ಆಸ್ತಿಯನ್ನು ಮಾರಾಟ ಮಾಡಿದ್ದೀರಿ ಎಂದರೆ ಸರಿ. ಕ್ರಯದಸ್ತಿನ ಸಂಪೂರ್ಣ ಮೊತ್ತವನ್ನು 2 ನೇ ಪ್ರತಿವಾದಿ ನಿಮಗೆ ಸಂಪೂರ್ಣವಾಗಿ ನೀಡಿದ್ದಾರೆ ಎಂದರೆ ಸರಿ. ಕ್ರಯದಸ್ತು ಆಗುವ ಸಮಯದಲ್ಲಿ ನಿಮ್ಮ ಮನೆಯ ಜನ ಯಾರು ಇದ್ದರು ಎಂದರೆ ನನ್ನ ಹೆಂಡತಿ ಸುನಂದ ಮತ್ತು ದೀಪಾ ಅವರು ಹಾಜರ ಇದ್ದರು ಎಂದು ಹೇಳುತ್ತಾರೆ. ಕ್ರಯದಸ್ತಿನ ಮೊತ್ತವನ್ನು ನೀವು 3 ಜನ ಸೇರಿ ತೆಗೆದುಕೊಂಡಿದ್ದೀರಿ ಎಂದರೆ ಸರಿ. 2 ನೇ ಪ್ರತಿವಾದಿ ಬರೆದುಕೊಟ್ಟ ಕ್ರಯದಸ್ತಿಗೆ ಸಂಬಂಧಿಸಿದಂತೆ ವಾದಿಗಳಾದ ನಿಮ್ಮ ಹೆಂಡತಿ ಮತ್ತು ಮಗಳ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. ವ್ಯವಸಾಯದ ಜಮೀನುಗಳ ಮೇಲೆ ತೆಗೆದ ಸಾಲಗಳಿಗೂ ಸಹ ಯಾವುದೇ ತಕರಾರು ಇರಲಿಲ್ಲ, ಎಲ್ಲರೂ ಸೇರಿ ಸದರಿ ಹಣ ಉಪಯೋಗಿಸುತ್ತಿದ್ದಿರಿ

ಎಂದರೆ ಸರಿ. ಉತ್ಪನ್ನದ ಹಾಗೂ ಬ್ಯಾಂಕನಲ್ಲಿ ತೆಗೆದ ಸಾಲದ ಎಲ್ಲಾ ಮೊತ್ತವನ್ನು ವಾದಿಗಳೆ ಇಟ್ಟುಕೊಳುತ್ತಿದ್ದು, ಖರ್ಚಿಗೆ ಹಣ ಮಾತ್ರ ನನಗೆ ನೀಡುತ್ತಿದ್ದರು. ಕ್ರಯದಸ್ತಿನ ವ್ಯವಹಾರದ ಸಮಯದಲ್ಲಿಯು ಸಹ ವಾದಿಗಳು ಹಾಜರ ಇದ್ದರು. 2 ನೇ ವಾದಿ ದೀಪಾ ಅವರ ಮದುವೆಗೂ ನೀವು ಸಾಕಷ್ಟು ವೆಚ್ಚ ಮಾಡಿದ್ದೀರಿ ಎಂದರೆ ಸರಿ. ನಿಮ್ಮ ಹೆಂಡತಿ ಮತ್ತು ಮಗಳ ದಿನನಿತ್ಯದ ವೆಚ್ಚ ನೀವೆ ನೋಡಿಕೊಳುತ್ತಿದ್ದಿರಿ ಎಂದರೆ ಸರಿ. ನಿಮಗೆ ವಯಸ್ಸಾದ ಕಾರಣ ವ್ಯವಸಾಯದ ಜಮೀನುಗಳನ್ನು ನೋಡಿಕೊಳ್ಳಲು ಆಗುವುದಿಲ್ಲ ಎಂದು ನೀವೆಲ್ಲರೂ ಸೇರಿ ಸದರಿ ಆಸ್ತಿ ಮಾರಾಟ ಮಾಡಬಹುದು ಎಂದು ನಿರ್ಧರಿಸಿದಿರಿ ಎಂದರೆ ಸರಿ. 3 ಜನ ಸೇರಿ 2 ನೇ ಪ್ರತಿವಾದಿ ಬೌರವ್ವ ಅವರಿಗೆ ಆಸ್ತಿ ಮಾರಾಟ ಮಾಡುವುದಕ್ಕೆ ನಿರ್ಧಾರ ಮಾಡಿದಿರಿ ಎಂದರೆ ಸರಿ. ಕ್ರಯದಸ್ತು ಆದಾಗಿನಿಂದ ನೀವು ಕ್ರಯಕ್ಕೆ ಕೊಟ್ಟ ಆಸ್ತಿಯ ಸ್ವಾಧೀನದಲ್ಲಿ 2 ನೇ ಪ್ರತಿವಾದಿ ಬೌರವ್ವ ಇದ್ದಾರೆ ಎಂದರೆ ಸರಿ. ಆ ರೀತಿ ಬೌರವ್ವ ಅವರ ಕಬ್ಜಾ ವಹಿವಾಟಿಗೆ ನೀವು ಮತ್ತು ವಾದಿಗಳಾದ ನಿಮ್ಮ ಹೆಂಡತಿ ಮಗಳು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿ.

<u>ಪಾಟೀ ಸವಾಲು : ಶ್ರೀ.ಎಸ್.ಪಿ.ವಿ ವಕೀಲರಿಂದ ವಾದಿಗಳ ಪರವಾಗಿ</u>

1.ನನ್ನ ಮತ್ತು ವಾದಿ-1 ಸುನಂದ ಅವರ ಮದುವೆ ಸುಮಾರು 40 ವರ್ಷಗಳ ಹಿಂದೆ ಆಗಿದೆ. 2 ನೇ ವಾದಿ ದೀಪಾ ಇವಳು ನಿಮ್ಮ ಮಗಳು ಎಂದರೆ ಸರಿ. ಸರ್ವೆ ನಂ.45/1 ಮತ್ತು 23/1 ರ ಆಸ್ತಿಗಳು ಇವು ನಿಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಿಮ್ಮ ಮತ್ತು 1 ನೇ ವಾದಿ ಸುನಂದ ಅವರ ನಡುವೆ ಕಳೆದ 10 ರಿಂದ 15 ವರ್ಷಗಳಿಂದ ಸಂಬಂಧ ಸರಿ ಇಲ್ಲ ಎಂದರೆ ಸಾಕ್ಷಿ ಕಳೆದ 30 ವರ್ಷಗಳಿಂದ ಇಲ್ಲ ಎಂದು ಹೇಳುತ್ತಾರೆ. 1 ನೇ ವಾದಿ ಸುನಂದ ಇವರು ಖಾಯಂ ಆಗಿ ಮನೆ ಕಟ್ಟಿಸಿಕೊಂಡು ಕಲಾದಗಿಯಲ್ಲಿ ವಾಸಿಸುತ್ತಾರೆ ಎಂದರೆ ಸರಿ. ವಾದಿ-1 ಸುನಂದ ಇವರು ಕಲಾದಗಿಯಲ್ಲಿ ಇದ್ದ ತಮ್ಮ ಮನೆ ಮುಂದೆ ಇದ್ದ ಪೆಟ್ರೋಲ ಬಂಕನಲ್ಲಿ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿ. ಆ ರೀತಿ ಪೆಟ್ರೋಲ್ ಪಂಪನಲ್ಲಿ ಕೆಲಸ ಮಾಡುತ್ತಿದ್ದರಿಂದಲೇ ಸುನಂದಾ ಅವರ ಜೀವನ ನಡೆದಿದೆ ಎಂದರೆ ಸರಿ. 2 ನೇ ವಾದಿ ದೀಪಾ ಅವರ ಮದುವೆ ಎಲ್ಲಿ ಆಯಿತು ಎಂದರೆ ಅವರ ಊರಿ ಬಳಿ ಆಗಿದ್ದು, ಅವರ ಊರ ಹೆಸರು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ 2 ನೇ ವಾದಿಯವರ ಮದುವೆಯ ವೆಚ್ಚ 1 ನೇ ವಾದಿಯವರ ಸಂಪಾದನೆಯಿಂದಲೇ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಹಣ ನೀಡಿದ್ದೇನೆ ಎಂದು ಹೇಳುತ್ತಾರೆ. 2 ನೇ ವಾದಿ ದೀಪಾ ಅವರ ಮದುವೆ ಸುಮಾರು 15 ವರ್ಷಗಳ ಹಿಂದೆ ಆಗಿದೆ. ನನ್ನ ಪ್ರಕಾರ 2 ವಾದಿ ದೀಪಾ ಅವರ ಮದುವೆ ಸುಮಾರು 1 ಲಕ್ಷ ರೂಪಾಯಿ ವೆಚ್ಚ ಮಾಡಿರುತ್ತೇನೆ. ನನ್ನ ಪ್ರಕಾರ 2 ನೇ ವಾದಿಯ ಮದುವೆಗೆ ವೆಚ್ಚವನ್ನು 2 ನೇ ಪ್ರತಿವಾದಿಗೆ ಆಸ್ತಿ

ಮಾರಾಟ ಮಾಡಿದ ಬಂದ ಹಣದಿಂದ ಮಾಡಿರುತ್ತೇನೆ. 2 ನೇ ಪ್ರತಿವಾದಿ ಬೌರವ್ವ ಅವರಿಗೆ ಆಸ್ತಿ ಮಾರಾಟ ಮಾಡಿ ಸುಮಾರು 10 ರಿಂದ 15 ವರ್ಷಗಳಾಯಿತು. 2 ನೇ ಪ್ರತಿವಾದಿ ಬೌರವ್ವ ಇವರು ನ್ನ ಅಣ್ಣನ ಮಗಳು. ನಿಮಗೆ ಕುಡಿಯುವ ಚಟ ಇತ್ತು ಎಂದರೆ ಸಾಕ್ಷಿ ದಿನವು ಕುಡಿಯುತ್ತಿದ್ದೆ ಎಂದು ಹೇಳುತ್ತಾರೆ. ನಾನು 2 ನೇ ಪ್ರತಿವಾದಿ ಬೌರವ್ವ ಇವರಿಗೆ ಮಾರಾಟ ಮಾಡಿದ ಸರ್ವೆ ನಂ.25. ಅದರ ಚಕಬಂದಿ ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು ಮಾರಾಟ ಮಾಡಿದ ಹೊಲ ಮಹಾಲಿಂಗಪೂರ ರಸ್ತೆಗೆ ಇದೆ. ನಾನು 2 ನೇ ಪ್ರತಿವಾದಿ ಬೌರವ್ವ ಇವರಿಗೆ 60 ಲಕ್ಷ ರೂಪಾಯಿಗಳಿಗೆ ಸದರಿ ಆಸ್ತಿ ಮಾರಾಟ ಮಾಡಿದ್ದೇನೆ. ಸದರಿ ಮೊತ್ತವನ್ನು ಎಲ್ಲಿಂದ ತೆಗೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಕಾರ 60 ಲಕ್ಷ ರೂಪಾಯಿ ತೆಗೆದುಕೊಂಡಿದ್ದೇನೆ ಎಂದು ಕ್ರಯದಸ್ತಿನಲ್ಲಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಹೇಳುತ್ತಾರೆ. ನನ್ನ ಪ್ರಕಾರ ಬಂದ 60 ಲಕ್ಷದಲ್ಲಿ ಸ್ವಲ್ಪ ಮೊತ್ತ ನನ್ನ ಬಳಿ ಖರ್ಚಿಗೆ ಇಟ್ಟು, ಉಳಿದ ಮೊತ್ತವನ್ನು ನನ್ನ ಹೆಂಡತಿ ಮಗಳು ತೆಗೆದುಕೊಂಡು ಹೋಗಿರುತ್ತಾರೆ. ಆ ರೀತಿ ಹಣವನ್ನು ನನ್ನ ಪ್ರಕಾರ 5 ವರ್ಷದ ಹಿಂದೆ ತೆಗೆದುಕೊಂಡು ಹೋಗಿದ್ದು, ನಿಖರವಾಗಿ ದಿನಾಂಕ ಹೇಳಲು ಬರುವುದಿಲ್ಲ. ಅದರಲ್ಲಿ 30 ಲಕ್ಷ ರೂಪಾಯಿ 500 ರೂಪಾಯಿಯ ಮುಖಬೆಲೆಯದಾಗಿದ್ದು, 200 ರೂಪಾಯಿ ಮುಖಬೆಲೆಯ 30 ಲಕ್ಷ ರೂಪಾಯಿ ಇತ್ತು.

2.ನಾನು ಮೊದಲು ನೀರು ತುಂಬಿ ಹಣ ಗಳಿಸುತ್ತಿದ್ದು, ಕಳೆದ 2 ವರ್ಷಗಳಿಂದ ಬೌರವ್ವ ಅವರು ನನ್ನನ್ನು ನೋಡಿಕೊಳುತ್ತಿದ್ದರು. ಕಳೆದ ವರ್ಷಗಳಿಂದ ನಿಮ್ಮನ್ನು 2 ನೇ ಪ್ರತಿವಾದಿ ಬೌರವ್ವ ಅವರು ನಿಮ್ಮನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. 2 ನೇ ಪ್ರತಿವಾದಿ ಬೌರವ್ವ ಅವರಿಗೆ 1 ನೇ ವಾದಿ ನನ್ನ ಹೆಂಡತಿ ಮತ್ತು 2 ನೇ ವಾದಿ ನನ್ನ ಮಗಳು ಎಂದು ಗೊತ್ತಿದೆ. 2 ನೇ ಪ್ರತಿವಾದಿ ಬೌರವ್ವ ಅವರಿಗೆ ವಾದಿಗಳಾದ ಸುನಂದ ಮತ್ತು ದೀಪಾ ಅವರಿಗೆ ಕ್ರಯದಸ್ತಿನ ಆಸ್ತಿಯಲ್ಲಿ ಹಕ್ಕು ಇದೆ ಎಂದು ಗೊತ್ತಿತ್ತಾ ಎಂದರೆ ಎಲ್ಲರೂ ಮಾತನಾಡಿಯೇ ಕ್ರಯದಸ್ತು ಬರೆದುಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಹಿರಿಯರ ಸಮಕ್ಷಮ ಮಾತುಕತೆ ಆಗಿದ್ದು, ಹಿರಿಯರಾಗಿ ಈರಪ್ಪ ಬೋರಡ್ಡಿ, ಯಶವಂತ ಚವ್ಹಾಣ ಮತ್ತು ಲಕ್ಷ್ಮಣ ಅವರು ಇದ್ದರು. ಎಷ್ಟು ದಿನಗಳ ಹಿಂದೆ ಮಾತುಕತೆ ಆಯಿತು ಎಂದರೆ ಮಾತುಕತೆ ಆಗಿಲ್ಲ, ಹಿರಿಯರು ನಿರ್ಧರಿಸಿದರು ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ವಾದಿಗಳಾದ ಸುನಂದ ಮತ್ತು ದೀಪಾ ಇವರು ಮಾತುಕತೆ ಸಮಯದಲ್ಲಿ ಹಾಜರ ಇದ್ದರಾ ಎಂದರೆ ಹಾಜರ ಇದ್ದರು ಎಂದು ಹೇಳುತ್ತಾರೆ. ಮಾತುಕತೆ ಮತ್ತು ಕ್ರಯದಸ್ತು ಆಗುವ ಮಧ್ಯದಲ್ಲಿ 2 ತಿಂಗಳ ಅವಧಿ ಇತ್ತು. ನನ್ನ ಪ್ರಕಾರ 60 ಲಕ್ಷ ರೂಪಾಯಿಗಳಲ್ಲಿ 1 ಲಕ್ಷ ನನಗೆ ಕೊಟ್ಟು

ಉಳಿದ 59 ಲಕ್ಷ ವಾದಿಗಳು ತೆಗೆದುಕೊಂಡು ಹೋಗಿರುತ್ತಾರೆ. ನನ್ನ ಪ್ರಕಾರ ಕ್ರಯದಸ್ತಿನ ದಿನ 59 ಲಕ್ಷ ರೂಪಾಯಿ ವಾದಿಗಳು ತೆಗೆದುಕೊಂಡು ಹೋಗಿರುತ್ತಾರೆ. ಕ್ರಯದಸ್ತಿನಲ್ಲಿ ವಾದಿಗಳು ಇದ್ದರು ಎಂದು ಮತ್ತು ಅವರಿಗೆ ಹಣ ತಲುಪಿದೆ ಎಂದು ಕ್ರಯದಸ್ತಿನಲ್ಲಿ ನಮೂದಿಸಿಲ್ಲ. ಆ ರೀತಿ ನಮೂದಿಸಲು ನನಗೆ ತೊಂದರೆ ಇರಲಿಲ್ಲ. ಕ್ರಯದಸ್ತಿನಲ್ಲಿ ನಮೂದಿಸಿದ ಮೊತ್ತ ನಿಮಗೆ ತಲುಪಿಲ್ಲ ಎಂದರೆ ತಲುಪಿದೆ ಎಂದು ಸಾಕ್ಷಿ ಹೇಳುತ್ತಾರೆ. ವಾದಿಗಳು ಕ್ರಯದಸ್ತು ಆಗುವ ಸಮಯದಲ್ಲಿ ಇದ್ದರು ಎಂದು ಮತ್ತು ಅವರು ಕ್ರಯದಸ್ತಿಗೆ ಸಹಿ ಮಾಡಿದ್ದಾರೆ ಎಂದು ಮತ್ತು ಕ್ರಯದಸ್ತಿನ ಮೊತ್ತ ತೆಗೆದುಕೊಂಡು ಹೋಗಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕ್ರಯದಸ್ತಿನ ವಾದಿಗಳು ಹಾಜರ ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯದಸ್ತಿಗೆ ಮಾಹಿತಿ ನಾನೇ ನೀಡಿರುತ್ತೇನೆ. ನಾನು ಮಾಹಿತಿಯನ್ನು ಚಿಂಚಲಿ ವಕೀಲರಿಗೆ ನೀಡಿದ್ದು, ಅದನ್ನು ಅವರು ಬರೆಸಿರುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)
ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

**ಅಸಲು ದಾವೆ ಸಂಖ್ಯೆ -98/2022**
**ಡಿ.ಡಬ್ಲ್ಯೂ-1**

**<u>ಸಾಕ್ಷಿಗೆ ಮಧ್ಯಾಹ್ನ 3-00 ಗಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲು ಃ ಶ್ರೀ.ಎಸ್.ಐ.ಪಿ ವಕೀಲರಿಂದ ಪ್ರತಿವಾದಿ-2 ಪರವಾಗಿ</u>**

1.ನಿಮ್ಮ ಪ್ರಕಾರ ನೀವು ಯಾರ ಬಳಿ ಸಾಲ ಪಡೆದಿದ್ದಿರಿ ಎಂದರೆ ಸಾಕ್ಷಿ ನನ್ನ ಹೆಂಡತಿ ಸಾಲ ತೆಗೆದುಕೊಂಡು ಹೋಗಿದ್ದಾಳೆ ಎಂದು ಹೇಳುತ್ತಾರೆ. ಸಾಲದ ಮೊತ್ತ ಎಷ್ಟು ಇತ್ತು ಎಂದರೆ ಬಹಳ ದಿನಗಳು ಆದ ಕಾರಣ ನೆನಪಿಲ್ಲ ಎಂದು ಹೇಳುತ್ತಾರೆ. ನೀವು ಪ್ರಮಾಣ ಪತ್ರದಲ್ಲಿ ನಿಮ್ಮ ಅಡಚಣೆಗಾಗಿ ಮಾರಾಟ ಮಾಡಲು ತೆಗೆದಿದ್ದೀರಿ ಎಂದು ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಹೇಳುತ್ತಾರೆ. ಆಸ್ತಿಗೆ ಸಂಬಂಧಿಸಿದಂತೆ ಉತಾರೆ ನಾನು ನೋಡಿದ್ದೇನೆ. ನೀವು 2014-15 ನೇ ಸಾಲಿನಲ್ಲಿ 52 ಸಾವಿರ, 80 ಸಾವಿರ ಮತ್ತೆ 80 ಸಾವಿರ ಮತ್ತು 1 ಲಕ್ಷ 80 ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಅದನ್ನು ಸಹ 1 ನೇ

ವಾದಿ ತೆಗೆದುಕೊಂಡು ಹೋಗಿದ್ದರು ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ಆಸ್ತಿ ಮಾರಾಟ ಮಾಡಿದ ನಂತರ ಸಾಲ ಮರುಪಾವತಿ ಮಾಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ವಾದಿಗಳು ಮತ್ತು ನಿಮ್ಮ ನಡುವೆ ಕಾನೂನಾತ್ಮಕವಾಗಿ ವಿಭಾಗ ಆಗಿಲ್ಲ ಎಂದರೆ ಆಗಿದೆ ಎಂದು ಹೇಳುತ್ತಾರೆ. ನನ್ನ ಪ್ರಕಾರ ಆ ರೀತಿ ವಿಭಾಗ 10 ವರ್ಷದ ಹಿಂದೆ ಆಗಿದೆ. ಆ ರೀತಿ ವಿಭಾಗ ತಲಾಠಿ ಸಮಕ್ಷಮ ಆಗಿದೆ. ನನಗೆ ಸದರಿ ವಿಭಾಗದಲ್ಲಿ ನನ್ನ ಪ್ರಕಾರ 4 ಏಕರೆ ಆಸ್ತಿ ಬಂದಿರುತ್ತದೆ. ವಾದಿಗಳ ಪಾಲಿಗೆ ಏನು ಬಂದಿತು ಎಂದರೆ ಸಾಕ್ಷಿ ನನ್ನ ಜೊತೆಗೆ ವೈವಾಹಿಕ ಜೀವನ ನಡೆಸಿಲ್ಲ ಎಂದು ಹೇಳುತ್ತಾರೆ. ವಿಭಾಗ ಆಗಿದೆ ಎಂದು ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕ್ರಯದಸ್ತಿನ ಆಧಾರದ ಮೇಲೆ ತಾವು ಖರೀದಿಸಿದ್ದಾರೆ ಎಂದು ಹೇಳುವ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಈಗಲೂ ಸಹ ವಾದಿಗಳು ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿ ನೀವು ಯಾವತ್ತು ಕ್ರಯದಸ್ತಿಗೆ ಕೊಟ್ಟಿಲ್ಲ ಮತ್ತು ಯಾವತ್ತು ಅದರ ಹಣ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಸ್ವಾಧೀನದಲ್ಲಿ ಈಗಲೂ ವಾದಿಗಳಾದ ಸುನಂದ ದೀಪಾ ಮತ್ತು 1 ನೇ ಪ್ರತಿವಾದಿ ನೀವು ಇದ್ದೀರಿ ಎಂದರೆ ಸರಿ. ಇವತ್ತು ನ್ಯಾಯಾಲಯಕ್ಕೆ ನೀವು 2 ನೇ ಪ್ರತಿವಾದಿಯೊಂದಿಗೆ ಬಂದಿದ್ದೀರಿ ಎಂದರೆ ಪ್ರತ್ಯೇಕವಾಗಿ ಬಂದಿದ್ದೇನೆ ಎಂದು ಹೇಳುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ 2 ನೇ ಪ್ರತಿವಾದಿ ಮಾಹಿತಿ ನೀಡಿದ್ದಾರೆ ಎಂದರೆ ನಾನೇ ಮಾಹಿತಿ ನೀಡಿದ್ದೇನೆ ಎಂದು ಹೇಳುತ್ತಾರೆ. ಆಂಗ್ಲ ಭಾಷೆಯಲ್ಲಿ ಬರೆದಿದ್ದು ಮಾಹಿತಿ ಇಲ್ಲ ಎಂದರೆ ನಾನೇ ಹೇಳಿ ಬರೆಸಿದ್ದೇನೆ ಎಂದು ಹೇಳುತ್ತಾರೆ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಇದ್ದ ಪಾಲನ್ನು ಕಬಳಿಸುವ ಉದ್ದೇಶದಿಂದ ನೀವು ಮತ್ತು 2 ನೇ ಪ್ರತಿವಾದಿಯವರು ಸಂಚು ರೂಪಿಸಿ ಸುಳ್ಳು ಕ್ರಯದಸ್ತು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ನಿಮಗೆ ಮಾಹಿತಿ ಇಲ್ಲದೇ ಇದ್ದರೂ ಸಹ 2 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ